ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1534 (1749)

2) ಸದಸ್ಯರ ಹೆಸರು : ಶ್ರೀ ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 22-03-2021

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಕುರಿತು ಸರ್ಕಾರಕ್ಕೆ ಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಬಂದಿದೆ. **ರಾಜ್ಯದಲ್ಲಿ ಕಾಡಾನೆಗಳ ಹಾವಳಿ ನಿಯಂತ್ರಿಸಲು ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.** 1. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. 2. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. 3. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

		4. ಕಳ್ಳಬೇಟೆ ತಡೆ ಶಿಬಿರಗಳ ಹಾಗೂ ಕ್ಷಿಪ್ರ ಕಾರ್ಯಾಚರಣೆ ತಂಡಗಳ ರೂಪದಲ್ಲಿ (Rapid Response Teams) ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ, ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ. 5. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ. 6. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ. 7. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. 8. ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಗಳಲ್ಲಿ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ–ತತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ಸರ್ಕಾರದ ನಿಯಮಾನುಸಾರ ಪರಿಶೀಲಿಸಿ, ಶೀಘ್ರವೇ ನೇರವಾಗಿ ಸಂತ್ರಸ್ತರ ಖಾತೆಗೆ ಪಾವತಿಸುವ ಪ್ರಕ್ರಿಯೆಯನ್ನು ಇ–ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.
ಆ)	ಕಳೆದ 5 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ದಾಖಲಾಗಿರುವ ಕಾಡಾನೆಗಳ ದಾಳಿ ಪ್ರಕರಣಗಳೆಷ್ಟು; ಈ ದಾಳಿಯಿಂದ ಉಂಟಾದ ಪ್ರಾಣಹಾನಿ ಮತ್ತು ಬೆಳೆ ನಷ್ಟವೆಷ್ಟು; (ವಿವರ ನೀಡುವುದು);	ಕಳೆದ 5 ವರ್ಷಗಳಲ್ಲಿ ಕಾಡಾನೆಗಳ ದಾಳಿಯಿಂದ ಉಂಟಾದ ಬೆಳೆ ಹಾನಿ, ಮಾನವ–ಪ್ರಾಣ ಹಾನಿ ಮತ್ತು ಮಾನವಗಾಯ ಪ್ರಕರಣದ ವಿವರ **ಅನುಬಂಧ–1 ರಲ್ಲಿ** ಒದಗಿಸಿದೆ.
ಇ)	ಕಳೆದ 5 ವರ್ಷಗಳಲ್ಲಿ ಆನೆ ದಾಳಿಗೊಳಗಾದ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು; ಈವರೆಗೂ ಎಷ್ಟು ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ; (ಫಲಾನುಭವಿಯ ಹೆಸರು ಮತ್ತು ಗ್ರಾಮದ ವಿವರ ನೀಡುವುದು)	ಕಳೆದ 5 ವರ್ಷಗಳಲ್ಲಿ ಕಾಡಾನೆಗಳ ದಾಳಿಯಿಂದ ಉಂಟಾದ ಮಾನವ–ಪ್ರಾಣ ಹಾನಿ ಪ್ರಕರಣಗಳ ವಿವರ **ಅನುಬಂಧ–2ರಲ್ಲಿ** ಒದಗಿಸಿದೆ.

ಈ)	ಪರಿಹಾರ ನೀಡದೇ ಬಾಕಿ ಉಳಿದಿರುವ ಕುಟುಂಬಗಳೆಷ್ಟು; ಪರಿಹಾರ ನೀಡುವಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಉಳಿದ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಮಾನವ-ಪ್ರಾಣ ಹಾನಿಯ ಎಲ್ಲಾ ಪ್ರಕರಣಗಳಲ್ಲಿ ದಯಾತ್ಮಕಧನ ಪಾವತಿಸಿದ್ದು, ಬಾಕಿ ಯಾವುದು ಇರುವುದಿಲ್ಲ. ಆದರೆ 233 ಬೆಳೆ ಹಾನಿ ಪ್ರಕರಣಗಳಲ್ಲಿ ಒಟ್ಟು ರೂ.19.12ಲಕ್ಷ ದಯಾತ್ಮಕಧನ ಅನುದಾನದ ಕೊರತೆಯಿಂದಾಗಿ ಪಾವತಿಸಲು ಬಾಕಿಯಿರುತ್ತದೆ. ಅನುದಾನದ ಲಭ್ಯತೆಯನುಸಾರ **"ಇ-ಪರಿಹಾರ"** ತಂತ್ರಾಂಶದ ಮೂಲಕ ಫಲಾನುಭವಿಗಳ ಖಾತೆಗಳಿಗೆ ನೇರವಾಗಿ ದಯಾತ್ಮಕಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಅಪಜೀ 75 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ-1

ಹಾಸನ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಕಾಡಾನೆಗಳ ದಾಳಿಯಿಂದ ಉಂಟಾದ ಬೆಳೆ ಹಾನಿ, ಮಾನವ–ಪ್ರಾಣ ಹಾನಿ ಮತ್ತು ಮಾನವ ಗಾಯ ಪ್ರಕರಣದ ವಿವರ

ಕ್ರ. ಸಂ.	ವರ್ಷ	ಬೆಳೆಹಾನಿ ಪ್ರಕರಣಗಳು		ಪ್ರಾಣಹಾನಿ ಪ್ರಕರಣಗಳು			ಮಾನವಗಾಯ ಪ್ರಕರಣಗಳು		ಪಾವತಿಸಿದ ಒಟ್ಟು ದಯಾತ್ಮಕ ಮೊತ್ತ
		ಪ್ರಕರಣಗಳ ಸಂಖ್ಯೆ	ಪಾವತಿಸಿದ ಮೊತ್ತ	ಪ್ರಕರಣಗಳ ಸಂಖ್ಯೆ	ಪಾವತಿಸಿದ ದಯಾತ್ಮಕ ಮೊತ್ತ	ಪಾವತಿಸಿದ ಮಾಸಾಶನ ಮೊತ್ತ	ಪ್ರಕರಣಗಳ ಸಂಖ್ಯೆ	ಪಾವತಿಸಿದ ಮೊತ್ತ	
1	2016–17	1,792	81,02,144	03	15,00,000	-	2	55,416	96,57,560
2	2017–18	3,050	1,87,16,020	05	25,00,000	-	4	2,42,326	2,14,58,346
3	2018–19	1,666	1,04,45,671	01	5,00,000	60,000	4	85,871	1,10,91,542
4	2019–20	2,097	1.21.30,926	03	15,00,000	1,18,000	4	97,662	1,38,46,588
5	2020–21 (28.02.2021ರ ಅಂತ್ಯಕ್ಕೆ)	2,153	75,19,032,	05	37,50,000	14,000	2	33,138	1,13,16,170
	ಒಟ್ಟು	10,758	4,47,82,867	17	97,50,000	1,92,000	16	5,14,413	6,73,70,206

ಅನುಬಂಧ-2

ಹಾಸನ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಸಂಭವಿಸಿರುವ ಕಾಡಾನೆ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ

ಪ್ರಕರಣಗಳ ವಿವರ

ಕ್ರ ಸಂ	ವಲಯ	ದಿನಾಂಕ	ಮೃತರ ಹೆಸರು ಮತ್ತು ವಿಳಾಸ (ಗ್ರಾ/ಗ್ರಾಮ)	ಪಾವತಿಸಿದ ಪರಿಹಾರ ಧನ
1	ಆಲೂರು	22.04.2016	ಚಿಕ್ಕಣ್ಣ ಬಿನ್ ತಮ್ಮೇಗೌಡ, ಕಣಿವೆಬಸವನಹಳ್ಳಿ ಗ್ರಾಮ, ಕೆ.ಹೊಸಕೋಟೆ ಹೋಬಳಿ, ಆಲೂರು	5,00,000/-
2	ಸಕಲೇಶಪುರ	17.02.2017	ನಾಗು ಪೂಜಾರಿ ಬಿನ್ ವೆಂಕಟ್ಟ ಪೂಜಾರಿ, ಮತ್ತಸಾಗರ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	5,00,000/-
3	ಸಕಲೇಶಪುರ	11.03.2017	ರಮೇಶ ಆಚಾರಿ ಬಿನ್ ಲೇಟ್ ಸುಬ್ಬಾಚಾರಿ, ಕುದರಂಗಿ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	5,00,000/-
4	ಸಕಲೇಶಪುರ	03.06.2017	ಅರುಣ ಕೆ.ಆರ್. ಬಿನ್ ರಾಮೇಗೌಡ, ಹೈದೂರು ಗ್ರಾಮ, ಕೆ.ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು.	5,00,000/-
5	ಸಕಲೇಶಪುರ	06.12.2017	ಯೋಗೇಶ್. ಹೆಚ್.ಎಸ್. ಬಿನ್ ಸಂಗೇಗೌಡ, ಹೆಗ್ಗೋವೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	5,00,000/-
6	ಆಲೂರು	23.12.2017	ಶಿವಯ್ಯ ಬಿನ್ ಈರಯ್ಯ, ಅಬ್ಬನ ಕೊಪ್ಪಲು ಗ್ರಾಮ, ಕೆ. ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು.	5,00,000/-
7	ಆಲೂರು	14.01.2018	ಭರತ ಬಿನ್ ಶ್ರೀಮತಿ ಭಾನುಮತಿ ಕೊಣಗತವಳ್ಳಿ ಗ್ರಾಮ, ಕೆ. ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು	5,00,000/-
8	ಸಕಲೇಶಪುರ	29.03.2018	ಜೋನಿ, ಬಿನ್ ಥಾಮಸ್, ಅತ್ತನಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು	5,00,000/-
9	ಸಕಲೇಶಪುರ	04.08.2018	ತಾಯಮ್ಮ ಕೋ ಮುರುಗೇಶ, ಹೊಸಗದ್ದೆ ಗ್ರಾಮ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು	5,00,000/-
10	ಸಕಲೇಶಪುರ	22.05.2019	ಲತಾ ಕೋಂ ಲೇಟ್ ಶೇಖರಶೆಟ್ಟಿ, ಕ್ಯಾಮನಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು	5,00,000/-
11	ಬೇಲೂರು	19.06.2019	ಪುಷ್ಪ ಕೋಂ ಠಾಕೂರ್ ಸಿಂಗ್, ದೇವರಹಳ್ಳಿ ಗ್ರಾಮ, ಮಾದಿಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.	5,00,000/-
12	ಹಾಸನ	23.07.2019	ಎಲ್.ಎನ್. ಅಣ್ಣೇಗೌಡ ಬಿನ್ ಲಿಂಗೇಗೌಡ, ಲಿಂಗರಸನಹಳ್ಳಿ ಗ್ರಾಮ, ಸಾಲಗಾಮೆ ಹೋಬಳಿ, ಹಾಸನ ತಾಲ್ಲೂಕು.	5,00,000/-
13	ಸಕಲೇಶಪುರ	01.09.2020	ಹೆಚ್.ಆರ್ ಆಸ್ತಿಕ ಬಿನ್ ಲೇ॥ ಹೆಚ್ಎಸ್ ರಾಜಪ್ಪ, ಕೊಲ್ಲಹಳ್ಳಿ ಗ್ರಾಮ ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	7,50,000/-
14	ಆಲೂರು	19.12.2020	ಪ್ರಧಾನ್ ಬಿನ್ ರಂಗೇಗೌಡ, ಕ್ಯಾತನಹಳ್ಳಿ ಕಾಲೋನಿ, ಕುಂದೂರು ಹೋಬಳಿ, ಆಲೂರು ತಾಲ್ಲೂಕು.	7,50,000/-
15	ಬೇಲೂರು	03.01.2021	ಎನ್. ರಾಜನ್, ಬಿನ್ ಅಚ್ಯುತನ್, ಪೆರುಂತ್ರಚಾಲ್ ಗ್ರಾಮ, ಕಣ್ಣೂರು ಜಿಲ್ಲೆ, ಕೇರಳ ರಾಜ್ಯ	7,50,000/-
16	ಅರಕಲಗೂಡು	27.01.2021	ರೇವಣ್ಣ @ ರವಿ, ಬಿನ್ ಚಿಕ್ಕೇಗೌಡ, ಚಿಕ್ಕಬೊಮ್ಮನಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು.	7,50,000/-
17	ಸಕಲೇಶಪುರ	11.02.2021	ಹೆಚ್.ಎಸ್ ವಸಂತ ಬಿನ್ ಲೇ॥ ಸಿಂಕ್ರ, ಹಲಸುಲಿಗೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು	7,50,000/-